JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕಾರಂತರ ಆಯ್ದ ಕಾದಂಬರಿಗಳಲ್ಲಿ ಕಂಡ ಹೆಣ್ಣಿನ ಲೋಕ

(ಸರಸಮ್ಮನ ಸಮಾದಿ, ಚೋಮನದುಡಿ, ಮೈಮನಗಳ ಸುಳಿಯಲ್ಲಿ, ಹೆತ್ತಳಾ ತಾಯಿ ಕಾದಂಬರಿಗಳನ್ನು ಅನುಲಕ್ಷಿಸಿ)

ಡಾ। ಗುಲಾಬಿ ಪೂಜಾರಿ
ಕನ್ನಡ ಉಪನ್ಯಾಸಕರು
ಸಂತ ಮೇರಿ ಕಾಲೇಜು,ಶಿರ್ವ

ಕಾರಂತರು ಸುಮಾರು ನಲವತ್ತೈದಕ್ಕಿಂತಲೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದರೂ,ಅವುಗಳಲ್ಲೆಲ್ಲಾ ವಿಸ್ತಾರವಾದ ಹೆಣ್ಣಿನ ಲೋಕ ಚಿತ್ರಿತವಾಗಿದ್ದರೂ, ನಾನಿಲ್ಲಿ ಕೇವಲ ಆಯ್ದ ನಾಲ್ಕು ಕಾದಂಬರಿಗಳಲ್ಲಿ ಚಿತ್ರಿತವಾದ ಸ್ತ್ರೀ ಲೋಕದ ಬಗೆಗೆ ಮಾತ್ರ ಮಾತನಾಡುತ್ತಿದ್ದೇನೆ.

ಪ್ರಪಂಚದಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನ ಆಯಾ ಕಾಲ,ದೇಶಗಳಿಗೆ ಭಿನ್ನವಾಗಿರುತ್ತದೆ. ಸಮಾಜದ ಜಾಯಮಾನ ನಿತ್ಯಪರಿವರ್ತನಶೀಲವಾದುದರಿಂದ ಹೆಣ್ಣನ್ನು ನೋಡುವ ದೃಷ್ಟಿಕೋನಗಳು ಕಾಲದಿಂದ ಕಾಲಕ್ಕೆ,ಸಮಾಜದಿಂದ ಸಮಜಕ್ಕೆ,ಜಾತಿಯಿಂದ ಜಾತಿಗೆ ,ವರ್ಣದಿಂದ ವರ್ಣಕ್ಕೆ, ವರ್ಗದಿಂದ ವರ್ಗಕ್ಕೆ ಬದಲಾಗುತ್ತದೆ.ನಂಜಮ್ಮಣ್ಣಿ.ಎಂ"ಇವರು ತಮ್ಮ ಭಾರತೀಯ ಸಾಮಾಜಿಕ ಸಂಸ್ಥೆಗಳು ಪುಟ ೨೧೬(೧೯೮೨)ರಲ್ಲಿ ಹೀಗೆ ಹೇಳುತ್ತಾರೆ" ಒಂದು ಕಾಲದಲ್ಲಿ ಅಮೇರಿಕನ್ನರು ಸ್ತ್ರೀಯರನ್ನು ದೇವತೆಗಳೆಂದು,ಪ್ರೆಂಚರು ಪ್ರೇಯಸಿಯರೆಂದು,ಜರ್ಮನ್ನರು ಮನೆಯೊಡತಿಯರೆಂದೂ,ಚೀನಿಯರು ಹಾಗೂ ಭಾರತೀಯರು ಮಕ್ಕಳ ತಾಯಿಯೆರೆಂದೂ,ಮುಸ್ಲಿಂರು ತಮ್ಮ ಕೈಗೊಂಬೆಗಳೆಂದುಪರಿಗಣಿಸುತ್ತಿದ್ದರು" ಎನ್ನುತ್ತಾರೆ.ಬಹುಶಃ ಇಲ್ಲಿ ಲೋಕೋ ಭಿನ್ನ ರುಚಿಃ ಎಂಬ ಮಾತನ್ನು ನೆನಪಿಸಿಕೊಳ್ಳಬಹುದೇನೊ, ಉದಾಃ ಲಂಕೇಶರ ನನ್ನವ್ವ ಫಲವತ್ತಾದ ಕಪ್ಪು ನೆಲ' ಎಂಬ ಅವ್ವ ಕವನವನ್ನು ಇಲ್ಲಿ ನೆನೆಯಬಹುದು ಹಾಗೆ ಕಾರಂತರು ಕಾದಂಬರಿಗಳ ಸ್ತ್ರೀಪಾತ್ರಗಳು ಪರಂಪರಾಗತ ಬದುಕಿನಲ್ಲಿ ನಂಬಿಕೆ ಇಟ್ಟವರು.ಗಂಡಿನ ಕೃಷಿ ಬದುಕಿಗೆ ,ವ್ಯವಹಾರಕ್ಕೆ ಸಹಾಯಕರಾಗಿ ನಿಂತವರು,ಇಂತಹ ಪಾತ್ರಗಳು ಓದುಗರಲ್ಲಿ ಗೌರವನ್ನುಂಟು ಮಾಡುವಂತೆ ಚಿತ್ರಿತವಾಗಿವೆ

೧.ಸರಸೋತಿ, ಪಾರೋತಿ ಯಂತಹ ಶ್ರಮಿಕ ವರ್ಗದ ದುಡಿಮೆಯೆ ದೇವರು ಎಂಬ ಹೆಣ್ಣು ಮಕ್ಕಳ ಲೋಕ ಒಂದೆಡೆಯಾದರೆ

೨.ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಇರುವ ಒಳನೋಟವನ್ನು ಬೆಳ್ಳಿ, ಮಂಜುಳೆಯರಂತಹ ಪಾತ್ರಗಳಲ್ಲಿ ನೋಡಬಹುದು.

೩.ದಾಂಪತ್ಯದ ಒಡಕು ಮತ್ತು ಹೆಣ್ಣುಗಳ ಜಾಣ್ಮೆಯನ್ನು ಸರಸಮ್ಮನಂತಹ ಪಾತ್ರಗಳಲ್ಲಿ ನೋಡಬಹುದು.

೪. ಕಾರಂತರು ಹೆಣ್ಣಿನ ಮನೋಲೋಕವನ್ನು ಒಳಹೊಕ್ಕು ಚಿತ್ರಿಸುತ್ತಾರೆ. ಅಲ್ಲಿ ವಿಸ್ಮೃತಿಯಾಗಲಿ,ಸಂಭ್ರಮವಾಗಲಿ,ಉತ್ಪ್ರೇಕ್ಷೆಯಾಗಲಿ,ಭ್ರಮೆಗಳಾಗಲಿ ಇಲ್ಲ,ಹೇವರಿಕೆಯಾಗಲಿ,ತಿರಸ್ಕಾರವಾಗಲಿ ಇಲ್ಲ.ಹೆಣ್ಣು ಮಕ್ಕಳ ಲೈಂಗಿಕತೆಯ ಬಗ್ಗೆ ಆ ಕಾಲಕ್ಕೆ ಕಾರಂತರ ದೃಷ್ಟಿಕೋನ ಎಂತಹದ್ದು ಎನ್ನುವುದನ್ನು

ಅವರ ಸ್ತ್ರೀಪಾತ್ರಗಳ ಮೂಲಕ ನೋಡಬಹುದು. ಬೆಳ್ಳಿ,ಮಂಜುಳೆಯಂತಹವರ ಲೈಂಗಿಕತೆ ಕೂಡ ಅವರಿಗೆ ಹಾದರ ಅಂತ ಕಂಡಿಲ್ಲ,ಅಲ್ಲಿ ಇವತ್ತಿನ ವರ್ತಮಾನದ ಬೆಡಗಾಗಲಿ,ಭಿನ್ನಾಣವಾಗಲಿ ಇಲ್ಲ,ವೈಭವೀಕರಣವು ಇಲ್ಲ,ಕಾರಂತರು ದೊಡ್ಡವರಾಗುವುದು ಇಲ್ಲಿಯೆ.ಕಾರಂತರು ಒಬ್ಬ ಪುರುಷರಾಗಿ ಹೆಣ್ಣಿನ ಮನೋಲೋಕವನ್ನು ಅವರು ಅರ್ಥೈಸಿಕೊಂಡ ಬಗೆ ಮೆಚ್ಚುಗೆಗೆ ಪಾತ್ರವಾಗುವಂತಹದ್ದು.ಆದ್ದರಿಂದಲೇ ಜ್ಞಾನಪೀಠ ಪ್ರಶಸ್ತಿ ವಿಜೇತ ಕೋಟ ಶಿವರಾಮ ಕಾರಂತರಿಗೆ ಅವರೇ ಸಾಟಿ.ಅವರನ್ನು ಮತ್ತೊಬ್ಬರೊಂದಿಗೆ ಹೋಲಿಸಲು ಬಹುಶಃ ಸಾಧ್ಯವೇ ಇಲ್ಲ.

ಕಾರಂತರು ಸುಮಾರು ನಲವತ್ತೈದಕ್ಕಿಂತಲೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದರೂ,ಅವುಗಳಲ್ಲೆಲ್ಲಾ ವಿಸ್ತಾರವಾದ ಹೆಣ್ಣಿನ ಲೋಕ ಚಿತ್ರಿತವಾಗಿದ್ದರೂ, ನಾನಿಲ್ಲಿ ಕೇವಲ ಆಯ್ದ ನಾಲ್ಕು ಕಾದಂಬರಿಗಳಲ್ಲಿ ಚಿತ್ರಿತವಾದ ಸ್ತ್ರೀ ಲೋಕದ ಬಗೆಗೆ ಮಾತ್ರ ಮಾತನಾಡುತ್ತಿದ್ದೇನೆ.

ಪ್ರಪಂಚದಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನ ಆಯಾ ಕಾಲ,ದೇಶಗಳಿಗೆ ಭಿನ್ನವಾಗಿರುತ್ತದೆ. ಸಮಾಜದ ಜಾಯಮಾನ ನಿತ್ಯಪರಿವರ್ತನಶೀಲವಾದುದರಿಂದ ಹೆಣ್ಣನ್ನು ನೋಡುವ ದೃಷ್ಟಿಕೋನಗಳು ಕಾಲದಿಂದ ಕಾಲಕ್ಕೆ,ಸಮಾಜದಿಂದ ಸಮಜಕ್ಕೆ,ಜಾತಿಯಿಂದ ಜಾತಿಗೆ ,ವರ್ಣದಿಂದ ವರ್ಣಕ್ಕೆ, ವರ್ಗದಿಂದ ವರ್ಗಕ್ಕೆ ಬದಲಾಗುತ್ತದೆ.ನಂಜಮ್ಮಣ್ಣಿ.ಎಂ"ಇವರು ತಮ್ಮ ಭಾರತೀಯ ಸಾಮಾಜಿಕ ಸಂಸ್ಥೆಗಳು ಪುಟ ೨೧೬(೧೯೮೨)ರಲ್ಲಿ ಹೀಗೆ ಹೇಳುತ್ತಾರೆ" ಒಂದು ಕಾಲದಲ್ಲಿ ಅಮೇರಿಕನ್ನರು ಸ್ತ್ರೀಯರನ್ನು ದೇವತೆಗಳೆಂದು,ಪ್ರೆಂಚರು ಪ್ರೇಯಸಿಯರೆಂದು,ಜರ್ಮನ್ನರು ಮನೆಯೊಡತಿಯರೆಂದೂ,ಚೀನಿಯರು ಹಾಗೂ ಭಾರತೀಯರು ಮಕ್ಕಳ ತಾಯಿಯರೆಂದೂ,ಮುಸ್ಲಿಂರು ತಮ್ಮ ಕೈಗೊಂಬೆಗಳೆಂದುಪರಿಗಣಿಸುತ್ತಿದ್ದರು" ಎನ್ನುತ್ತಾರೆ.ಬಹುಶಃ ಇಲ್ಲಿ ಲೋಕೋ ಭಿನ್ನ ರುಚಿಃ ಎಂಬ ಮಾತನ್ನು ನೆನಪಿಸಿಕೊಳ್ಳಬಹುದೇನೊ, ಉದಾಃ ಲಂಕೇಶರ ನನ್ನವ್ವ ಫಲವತ್ತಾದ ಕಪ್ಪು ನೆಲ' ಎಂಬ ಅವ್ವ ಕವನವನ್ನು ಇಲ್ಲಿ ನೆನೆಯಬಹುದು ಹಾಗೆ ಕಾರಂತರು ಕಾದಂಬರಿಗಳ ಸ್ತ್ರೀಪಾತ್ರಗಳು ಪರಂಪರಾಗತ ಬದುಕಿನಲ್ಲಿ ನಂಬಿಕೆ ಇಟ್ಟವರು.ಗಂಡಿನ ಕೃಷಿ ಬದುಕಿಗೆ ,ವ್ಯವಹಾರಕ್ಕೆ ಸಹಾಯಕರಾಗಿ ನಿಂತವರು,ಇಂತಹ ಪಾತ್ರಗಳು ಓದುಗರಲ್ಲಿ ಗೌರವನ್ನುಂಟು ಮಾಡುವಂತೆ ಚಿತ್ರಿತವಾಗಿವೆ.

೧.ಸರಸೋತಿ, ಪಾರೋತಿ ಯಂತಹ ಶ್ರಮಿಕ ವರ್ಗದ ದುಡಿಮೆಯೆ ದೇವರು ಎಂಬ ಹೆಣ್ಣು ಮಕ್ಕಳ ಲೋಕ ಒಂದೆಡೆಯಾದರೆ

೨.ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಇರುವ ಒಳನೋಟವನ್ನು ಬೆಳ್ಳಿ, ಮಂಜುಳೆಯರಂತಹ ಪಾತ್ರಗಳಲ್ಲಿ ನೋಡಬಹುದು.

೩.ದಾಂಪತ್ಯದ ಒಡಕು ಮತ್ತು ಹೆಣ್ಣುಗಳ ಜಾಣ್ಮೆಯನ್ನು ಸರಸಮ್ಮನಂತಹ ಪಾತ್ರಗಳಲ್ಲಿ ನೋಡಬಹುದು.

೪.ತಾಯ್ತನದ ಪರಿಭಾಷೆಯನ್ನೆ ಮರುಚಿಂತನೆಗೆ ಒಳಪಡಿಸುವ ಕುಸುಮೆಯಂತಹ ಪಾತ್ರಗಳನ್ನು ನೋಡಬಹುದು.

ಚೋಮನ ದುಡಿಯ ಬೆಳ್ಳಿ ಹರಿವ ನೀರಿನಪ್ರವಾಹದೊಂದಿಗೆ ತೇಲುತ್ತಾ ಎಂದಾದರೂ ಮುಳುಗುವ ಸ್ಥಿತಿ ಬಂದೀತೆಂಬ ಕಲ್ಪನೆಯಿಲ್ಲದ ಸರಳ ಹೆಣ್ಣು ,ಸಂದರ್ಭದ ಶಿಶುವಾದರು ಈ ಹೆಣ್ಣಿಗೆ ಮಾನಸಿಕ ದೌರ್ಬಲ್ಯ ಸಹಜವಾದದ್ದು,ತಂದೆಯಾದ ಚೋಮ ಬೇಸಾಯಗಾರನಾಗಬೇಕೆಂಬ ಕನಸು ಕಾಣುವುದನ್ನು ಅವಳು ಭ್ರಮೆಯೆಂದು ತಿಳಿಯುತ್ತಾಳೆ ಇದು ನನಸಾಗದ ಕನಸು ಎಂಬುದು ಆಕೆಗೆ ತಿಳಿದಿದೆ.ಅವಳಲ್ಲಿ ಭಾವಾತೀರೇಕದ ಗೊಂದಲಗಳಿಲ್ಲ.ತನ್ನ ಬದುಕಿನ ಬಗೆಗೆ ಆಳವಾಗಿ ಚಿಂತಿಸುವ ಕನಸುಗಾರಿಕೆಯಾಗಲಿ, ವ್ಯವಧಾನವಾಗಲಿ ಆಕೆಯಲ್ಲಿ ಇಲ್ಲ.ತಂದೆಯ ಆಸೆ ಫಲಿಸದೆಂಬ ಗಟ್ಟಿ ನಿರ್ಧಾರದಿಂದಲೇ ಅವಳು ಹೀಗೆ ಹೇಳುತ್ತಾಳೆ."ನೀನು ಧನಿಯರೊಂಗೆ ಬಾಯಿ ತೆರೆದು ಮರ್ಯಾದೆಯನ್ನು ಕಳೆದುಕೊಳ್ಳ ಬೇಡ""ಬೆಳ್ಳಿಗೆ ತಾಯಿ ಇಲ್ಲ.ಗುರುವ,ಚನಿಯ ಇಬ್ಬರು ಅಣ್ಣಂದಿರು,ಕಾಳ,ನೀಲ ಅವಳ ತಮ್ಮಂದಿರು,ಈ ಸಂಸಾರದ ಒಡತಿ ಅವಳು.ಚೋಮನ ಮಾತಿಗೆ ಪ್ರತಿಯಾಡುವ ದೈರ್ಯ ಗಂಡು ಮಕ್ಕಳಲ್ಲಿ ಇಲ್ಲವಾದರೂ ಬೆಳ್ಳಿಗೆ ಆ

ಸಾಮರ್ತ್ಯವಿದೆ.ಏಕೆಂದರೆ ಬೆಳ್ಳಿ ಚೋಮನ ಜೀವ.ಅವಳ ಮಾತಿಗೆ ಎದುರುವಾದಿಸುವ ಎದೆಗಾರಿಕೆಯು ಅವನಲ್ಲಿ ಇಲ್ಲ. ಅವನ ಹೊಲತಿ ಸತ್ತ ಮೇಲೆ ಆ ಮನೆಗೆ ಬೆಳ್ಳಿಯೆ ಬೆಳಕು.ಚೋಮ ಅವಳಿಗಾಗಿಯೆ ಜೀವ ಹಿಡಿದಿದ್ದಾನೆ.ಮುಂದಿನ ಜಾತ್ರೆ ಕಳೆಯುವುದರೊಳಗೆ ಬೆಳ್ಳಿಗೆ ಒಳ್ಳೆಯ ಹುಡುಗನನ್ನು ನೋಡಿ ಮದುವೆ ಮಾಡಿಬಿಡಬೇಕು ಎಂಬ ವಿಚಾರದ ಜೊತೆಯಲ್ಲೆ ಅವಳ ಅಗಲುವಿಕೆಯ ನೋವು ಅವನನ್ನು ಕಾಡುತ್ತದೆ."ಇನ್ನು ಚಿಕ್ಕವಳು ಅವಸರವೇನು ಎಂದುಕೊಳ್ಳುತ್ತಾನೆ.ಇಂಥ ಮಮತೆಯ ವರ್ತುಲದೊಳಗೆ ಸುತ್ತುತ್ತಿರುವ ಬೆಳ್ಳಿಗೆ ಆರು ಮಂದಿಯ ಸಂಸಾರಕ್ಕೆ ಕೂಳು ಬೇಯಿಸಿ ಹಾಕುವ ಜವಬ್ದಾರಿ ಇದೆ.ಸರಿಯಾಗಿ ಸಾಗುವ ದಿನ ಎರಡು ಪಾವು ಅಕ್ಕಿಯನ್ನು ಬೇಯಿಸಿ ಬೆಳ್ಳಿ ಒಂದು ಉದ್ದದ ಗಂಜಿಯನ್ನು ಮಾಡುತ್ತಾಳೆ ಅದನ್ನು ಕುಡಿದು ಕೆಲಸಕ್ಕೆ ಹೊರಟರೆ ಎರಡನೇಯ ಊಟ ಹೊತ್ತು ಮುಳುಗುವುದರೊಳಗೆ.

ಮನಸ್ಸಿನ ಆಸೆ ಇಡೇರದದಾಗ ಹತಾಶನಾದ ಚೋಮ ಕುಡಿದು ಬಂದು ದುಡಿ ಬಾರಿಸುತ್ತಾ ಮಲಗಿದ ಮಕ್ಕಳು ಕುಣಿಯಬೇಕೆಂದು ಅವುಗಳಿಗೆ ಹೊಡೆಯುತ್ತಾನೆ.ಆಗ ಬೆಳ್ಳಿ "ಅಪ್ಪಾ ನಿನಗೆ ಕುಣಿಯುವ ಮನಸ್ಸಾದರೆ ನನ್ನ ಬೆನ್ನ ಮೇಲೆ ಕುಣಿದು ಬಿಡು.ಕುಡಿದು ಆ ಸಣ್ಣ ಮಕ್ಕಳ ಪ್ರಾಣವನ್ನು ತಿನ್ನಬೇಡ" ಎಂದು ಗದರಿಸಿದಳು.ಅವಳ ಮಾತಿನ ಅಬ್ಬರ,ಕಣ್ಣಿನ ಕೆರಳುಗಳಿಂದ ಚೋಮನ ಹೃದಯದಲ್ಲೂ ಬೀತಿ ನಾಟಿತು."ಚೋಮನ ಮೇಲೆ ಅವಳು ತೋರಿಸುವ ಯಜಮಾನಿಕೆಯಲ್ಲಿ ಅಧಿಕಾರದ ದರ್ಪವಿರದೆ ಕುಟುಂಬದ ಸೂತ್ರವನ್ನು ಹಿಡಿದಿಡುವ ಮತ್ತು ಹಸಿವಿನಿಂದ ತನ್ನ ಸಂಸಾರವನ್ನು ಪಾರಾಗಿಸುವ ಉತ್ಕಟೇಚ್ಛೆಯನ್ನು ಕಾಣಬಹುದು ಇದಕ್ಕೆ ಆಕೆ ಬೇಸಿಗೆಯ ದುಡಿತದ ಅಕ್ಕಿಯನ್ನು ಮಳೆಗಾಲಕ್ಕಾಗಲಿ ಎಂದು ಒಡೆಯರ ಮನೆಯಲ್ಲಿರಿಸಿದ್ದನ್ನು ನೋಡಬಹುದು.ನೆಂಟರು ಬಂದು ವಾರಗಟ್ಟಲೇ ತಮ್ಮ ಬಿಡಾರದಲ್ಲೆ ಟೀಕಾಣಿ ಹೂಡಿದಾಗ ಚೋಮನಿಗೆ ಸಂತೋಷವಾದರೂ ಬೆಳ್ಳಿಯ ಚಡಪಡಿಕೆಯಲ್ಲಿ ಆ ಹೆಣ್ಣಿನ ಲೋಕದ ಕಾಳಜಿಯನ್ನು ನೋಡಬಹುದು.

೨.ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಇರುವ ಒಳನೋಟ

ಹೆಣ್ಣು ಮಕ್ಕಳ ಲೈಂಗಿಕತೆಯನ್ನು ಕಾರಂತರು ಹಾದರ ಎನ್ನುವುದಿಲ್ಲ.ಮನ್ವೇಲನ ಮೋಸಕ್ಕೆ ಬಲಿಯಾಗುವ ಬೆಳ್ಳಿಯದಾಗಲಿ,ಗಣಿಕಾಸ್ತ್ರೀಯಾದ ಮೈಮನಗಳ ಸುಳಿಯಲ್ಲಿನ ಮಂಜುಳೆಯದಾಗಲಿ,ಹೆತ್ತಳಾ ತಾಯಿಯ ಕುಸುಮೆಯದಾಗಲಿ ಹಾದರ ಅಂತ ಕಂಡಿಲ್ಲ ಆ ಕಾಲಕ್ಕೆ ಲೈಂಗಿಕತೆಯ ಕುರಿತು ಕಾರಂತರ ದೃಷ್ಟಿಕೋನ ವಿಶಾಲವಾದದ್ದು.ಚೋಮನ ದುಡಿಯ ಬೆಳ್ಳಿಯ ಕುರಿತು ಮಿಂಗೇಲ ದೊರೆಗಳ ಕಾಮಪಿಪಾಸೆಗೆ ಬಲಿಯಾದ ಬೆಳ್ಳಿ ಭೀತಿಯನ್ನು ಹೊತ್ತುಕೊಂಡೇ ಭೋಗನ ಹಳ್ಳಿಗೆ ತಿರುಗಿ ಬಂದಳು.ತನ್ನ ಅನೈತಿಕ ವ್ಯವಹಾರದ ಸುಳುಹು ತಂದೆಗೆ ಅರಿವಾಗಿದ್ದು,ಅವಳ ಭವಷ್ಯದ ಚಿಂತನೆಗಳನ್ನು ಹುಡಿಗೊಳಿಸಿದೆ. ಯಾವುದು ನೀತಿ? ಯಾವುದು ಅನೀತಿ ಎಂಬ ಪ್ರಶ್ನೆಯಿಂದ ಅವಳು ತಲೆಕೆಡಿಸಿಕೊಂಡದ್ದಿಲ್ಲ.ಎಲ್ಲವೂ ನಿಸರ್ಗದ ವ್ಯಾಪಾರವೆಂಬಂತೆ ಅವಳು ಬದುಕನ್ನು ಸಾಗಿಸಿದ್ದಾಳೆ ಮಗಳ ಕೃತ್ಯ ತಿಳಿದೂ ಕೂಡ ಚೋಮ "ನನ್ನ ಬೆಳ್ಳಿ ನನ್ನನ್ನು ವಂಚಿಸಿಬಿಟ್ಟಳೇ ಎಂದು ಕೊಂಡ.ಕೊನೆಗೆ ಅವಳ ತಾರುಣ್ಯ,ತಾನವಳ ಮದುವೆಯನ್ನು ಮುಂದೂಡಿದ ತಪ್ಪು,ಅವನಿಗಾಗಿ ಅವಳು ಕಾಫಿ ತೋಟಕ್ಕೆ ಹೋದುದು,ತನ್ನ ಋಣವನ್ನಷ್ಟು ಬೇಗನೆ ತೀರಿಸಿ ಬಂದುದು,ಎಲ್ಲಾ ಸ್ಮರಣೆಗಳು ಬಂದವು"ಪಾಪ" ಎಂದ 'ನಾನು ಅವಳಂತೆ ಹೆಣ್ಣಾಗಿದ್ದರೆ ನನ್ನ ಪಾಡೇನು? ಚೋಮನ ಬಾಯಲ್ಲಿ ಕಾರಂತರು ಹೀಗೆ ಹೇಳಿಸಿದಂತೆ ಒದುಗರಿಗೂ ಅನ್ನಿಸುತ್ತದೆ.

ಇನ್ನು ಮೈಮನಗಳ ಸುಳಿಯಲ್ಲಿ ಮುಖ್ಯವಾಗಿ ಬರುವ ಮೂರು ಸ್ತ್ರೀಪಾತ್ರಗಳು ಮಂಜುಳೆ,ಶಾರಿ,ಮತ್ತು ಚಂದ್ರಿಯರದು. ಕಾರಂತರು ಇಲ್ಲಿ ಬೆಲೆವೆಣ್ಣುಗಳಿಗೂ ಒಂದು ಮನಸ್ಸಿದೆ.ಆ ಮನಸ್ಸು ಕೂಡ ಸೂಕ್ಷ್ಮ ಸಂವೇದಿಯಾಗಿರಬಲ್ಲುದು. ಸುಂದರವೂ ಮಧುರವು ಆದುದಕ್ಕೆ ತುಡಿಯಬಲ್ಲುದು.ಗಣಿಕಾ ಸ್ತ್ರೀಯರಿಗೂ ಆಯ್ಕೆಯ ಸ್ವಾತಂತ್ರ್ಯವಿರತಕ್ಕದ್ದು.ಏಕೆಂದರೆ,ಅವರದು ಒಂದು ವೃತ್ತಿ,ಅದರಲ್ಲೂ ಒಂದು ನಿಯತ್ತು, ಪ್ರಾಮಾಣಿಕತೆ,ಸ್ವಂತಿಕೆ ಇರಬಹುದಾದುದು ಎಂದು ಇಲ್ಲಿ ಗುರುತಿಸುತ್ತಾರೆ.ದೇಹದ ಬಯಕೆಯೊಂದೇ ಅಲ್ಲ, ಮನಸ್ಸಿನ ತುಡಿತವು ಅಷ್ಟೇ ಮಹತ್ವವಾದದ್ದು. ಮಂಜುಳೆಯ ಪಾತ್ರ ಅವಳ ವೃತ್ತಿಯ ಬಗೆಗೆ ಗೌರವವನ್ನೂ,ಮಾನವೀಯವಾದ ಸಹಾನುಭೂತಿಯನ್ನೂ ಒತ್ತಾಯಿಸುತ್ತದೆ.ಮಂಜುಳೆಯಂಥ ಬೆಲೆವೆಣ್ಣಿಗೂ

ಮಗುವೊಂದು ಬೇಕು.ಅದನ್ನು ನೀಡಬಲ್ಲ ಒಳ್ಳೆಯ ಗಂಡುಗಳು ಬೇಕು ಎಂದೆನಿಸುವುದು.ಅವಳು ತನ್ನ ಜೀವನದಲ್ಲಿ ಸಾರ್ಥಕ್ಯದ ಕ್ಷಣವನ್ನು,ಧನ್ಯಭಾವವನ್ನು ಪಡೆಯಬೇಕೆಂಬ ಉದಾರವಾದಿ ನಿಲುವಿನಿಂದ ಪ್ರೇರಿತವಾಗಿದೆ ಅದಕ್ಕೆ ತಕ್ಕಂತೆ ಅವಳ ಸೂಕ್ಷ್ಮ,ಉದಾರಿ,ರಸಿಕ ಗುಣಗಳು ಚಿತ್ರಿತವಾಗಿದ್ದು ಅವಳ ಬಯಕೆ-ಅಭೀಪ್ಸೆಗಳಿಗೆ ಸಮರ್ಥನೆ ನೀಡುತ್ತದೆ. ವೈದೃಶ್ಯವಾದ ದಾಂಪತ್ಯ ಸಂಬಂಧಗಳು(ರಾಮಪ್ಪ ಅಡಿಗಳು ಮತ್ತು ಕಾವೇರಮ್ಮ) ಹಾಗೂ ಅವಳಿಗಿಷ್ಟವಾಗದ ಗಂಡುಗಳೊಂದಿಗಿನ ಅವಳ ಸಂಬಂಧದ ಅನುಭವದ ಮೆಲುಕಾಟ ಅವಳ ವ್ಯಕ್ತಿತ್ವಕ್ಕೆ ಋಜುತ್ವವನ್ನೂ,ಸಮಗ್ರತೆಯನ್ನೂ ತಂದು ಕೊಡುತ್ತವೆ.ಗಂಡು-ಹೆಣ್ಣಿನ ಸಂಬಂಧದಲ್ಲಿರಬೇಕಾದ ಜೈವಿಕ ಹೊಂದಾಣಿಕೆ,ಮಾನವೀಯ ಸಂಸ್ಪರ್ಶ,ನೈತಿಕ ಹೊಣೆ, ಸೌಂದರ್ಯಾತ್ಮಕ ಅನುಭೂತಿಗಳಿಗೆ ಒತ್ತು ಹಾಕುತ್ತವೆ.ಇಲ್ಲಿ ಕಾರಂತರು ಮಹಾನ್ ಚಿಂತಕರಾಗಿ ,ಮಾನವತಾವಾದಿಯಾಗಿ,ನೈತಿಕ ಸುಧಾರಕರಾಗಿ,ಜೀವ ಪಕ್ಷಪಾತಿಯಾಗಿ ಎದ್ದು ಕಾಣುತ್ತಾರೆ.ದಾಂಪತ್ಯ-ದಾಂಪತ್ಯೇತರ ಸಂಬಂಧಗಳನ್ನು ಮುಖಾಮುಖಿಯಾಗಿಸಿ ಇಡಿಯ ಬದುಕಿನ ನೆಲೆ ಬೆಲೆಗಳನ್ನು ಮಾಪನ ಮಾಡುತ್ತಾರೆ.ದೇಹವನ್ನಷ್ಟೇ ಪ್ರೀತಿಸಿ,ಮನಸ್ಸಿನ ಭಾವನೆಗಳಿಗೆ ಕುರುಡಾಗುವ ಪುರುಷ ಕಾಮಾವನ್ನು ಕಾರಂತರು ಇಲ್ಲೂ ಆಕ್ಷೇಪಿಸುತ್ತಾರೆ. ಕಾಳಿಂಗಯ್ಯ,ಕಂಡ್ಲೂರು ಪೈ,ನಂಜಪ್ಪ ನಂತಹ ತಮ್ಮ ವೈಯಕ್ತಿಕ ಪ್ರತಿಷ್ಠೆ,ಸಂಪತ್ತಿನ ಪ್ರದರ್ಶನ, ಪೈಪೋಟಿಯ ಮನೋಭಾವದಿಂದ ಹೆಣ್ಣನ್ನು ದಾಳವನ್ನಾಗಿ ಮಾಡಿಕೊಳ್ಳುವ ಪುರುಷ ಪ್ರವೃತ್ತಿಯ ಕ್ಷುದ್ರತೆಯನ್ನು ಕಾರಂತರು ಇಲ್ಲಿ ವಿಡಂಬಿಸಿದ್ದಾರೆ. ಪಮ್ಮ-ದುಗ್ಗಿಯರೆಂಬ ವೃದ್ಧ ಹೊಲೆಯ ದಂಪತಿಗಳ ಅನ್ಯೋನ್ಯತೆ ಮಂಜುಳೆಗೆ ಮೆಚ್ಚುಗೆಯಾಗುತ್ತದೆ. ಆಕೆಯ ಕನಸಿನಲ್ಲಿ ಇವರಿಬ್ಬರೂ ತರುಣ ವಧೂವರರಾಗಿ ಕುದುರೆಯೊಂದನ್ನು ಹತ್ತಿ ಕಾಣಿಸಿಕೊಳ್ಳುತ್ತಾರೆ. ಲಕ್ಷ್ಮಣತೀರ್ಥರು ಇನ್ನೊಮ್ಮೆ ತನ್ನಲ್ಲಿಗೆ ಬಂದಿದ್ದರೆ ತಾವಿಬ್ಬರೂ ಪಮ್ಮ-ದುಗ್ಗಿಯರಂತಾಗಬಹುದಿತ್ತೆಂಬ ಮಂಜುಳೆಯ ಯೋಚನೆ ಇಲ್ಲಿ ಕಾರಂತರ ಜೀವಪರ ಧೋರಣೆಯನ್ನು ನೋಡಬಹುದು.

ಬೆಲೆವಣ್ಣಾದರು ಮಂಜುಳೆ ಗರತಿಯ ಜೀವನಾದರ್ಶಗಳನ್ನು ಮೆಚ್ಚುವವಳು. ಪಮ್ಮ-ದುಗ್ಗಿಯರಂಥ ಹೊಲೆಯ ವೃದ್ಧದಂಪತಿಗಳ ಭೇಟಿ- ಸಾವಿನ ಸಂದರ್ಭದಲ್ಲಿ ಮಂಜುಳೆ ನಡೆಸುವ ಚಿಂತನೆಯಲ್ಲಿ ಇದು ಎದ್ದು ಕಾಣುತ್ತದೆ."ಅಗ್ನಿಯ ಸುತ್ತ ಏಳು ಸುತ್ತು ಬರಲಿ,ಎಪ್ಪತ್ತು ಸುತ್ತು ಬರಲಿ ಸುತ್ತಿದ್ದು ಸಾರ್ಥಕವಾಗಬೇಕಿದ್ದರೆ ದುಗ್ಗಿ-ಪಮ್ಮರ ಹಾಗಿರಬೇಕು. ಹಾಗಿರುತ್ತೇವೆಂದು ಒಬ್ಬರಿಗೊಬ್ಬರು ಅಭಯಕೊಟ್ಟು ಕೊನೆಗೆ ಏ ಹೆಣ್ಣೇ,ನಿನ್ನ ಮಗುವನ್ನು ನೋಡು" ಎನ್ನುವ ಸ್ಥಿತಿ ಬಂದುದಾದರೆ ಅದಕ್ಕಿಂತ ಅಂಥ ಕಟ್ಟಿಗೆ ಸಿಲುಕದ, ಮಾತು ಕೊಟ್ಟು ಮೋಸ ಮಾಡದ ನನ್ನಂಥವಳ ಬಾಳ್ವೆ ಒಳ್ಳೆಯದಲ್ಲವೆ? ನಡೆಯಿಸದಂಥ ಯಾವುದೇ ಮಾತು ಎಷ್ಟು ಗಂಭೀರವಾಗಿದ್ದರೇನಂತೆ ,ಇಲ್ಲಿ ಮಂಜುಳೆಯ ಬದಲಿಗೆ ಕಾರಂತರೆ ಮಾತನಾಡಿದಂತೆನಿಸುತ್ತದೆ.

ನೀನು ಬಯಸಿದರೆ ನಿನ್ನ ಎಟುಕಿನಲ್ಲಿ ಸಿಗದ ಹೂವಿಲ್ಲ,ಹೆಣ್ಣಿಲ್ಲ' ಎಂದು ಪದ್ಮನಾಭ ಹೇಳುವುದುಂಟು ,ನಾನು ಹಾಗೆ ಕೈಯನ್ನು ಹೊರಕ್ಕ ಚಾಚಿ ಬೆರಳಿಗೆ ಸಿಕ್ಕಿದ್ದನ್ನೆಲ್ಲ ಬಾಚಿ ಹತ್ತಿರ ಹಿಡಿದುಕೊಂಡು ಹೀಚು ಎಲೆ ಕಾಯಿ ಕಸಗಳನ್ನು ಎಸೆದು ಹಣ್ಣನ್ನು ಮಾತ್ರ ಉಳಿಸಿ ಕೊಂಡು,ಒಂದೊಂದನ್ನೇ ಬಾಯಿಗಿಟ್ಟು ಕಚ್ಚಿ ನಾಲಿಗೆಗೆ ಒಗ್ಗದ್ದನ್ನು ಉಗಿದು, ಒಗ್ಗಿದ್ದನ್ನು ಸವಿಯುವ ಆಟವಲ್ಲ ಇದು,ನನ್ನ ಮನದ ಎಟುಕು ಬಾನಿಗೆ ಚಾಚಬಹುದು,ಕಣ್ಣಿನ ಎಟುಕು ಯೌವನದ ಹಲವಾರು ಗಂಡುಗಳನ್ನು ನಾಟಬಹುದು.ಇಲ್ಲಿ ಅವುಗಳ ಎಟುಕಿಗೆ ನಾನು ಸಿಲುಕಿ,ಇನ್ನೊಬ್ಬರಲ್ಲಿ ಅಂಥ ಬಯಕೆ ಹುಟ್ಟಲೂಬಹುದು,ಆದ್ದರಿಂದ ಆಯಿತೇನು ಗಂಡು ಹೆಣ್ಣು ಸಮೀಪ ಬರುವುದಕ್ಕೊಂದು ನೆಪ ಮನಸ್ಸನ್ನು ತಿಳಿಯುವುದಕ್ಕೆ,ಆನಂದ ಪಡುವುದಕ್ಕೆ ಹೊಂದಿದ್ದರೆ ಹಿಗ್ಗುವುದಕ್ಕೆ,ಹೊಂದದೆ ಹೋದರೆ ನರಳುವುದಕ್ಕೆ ಕಾಲ ಬೇಕು. ಕೈಯಲ್ಲಿ ಹಿಡಿದ ಕಾಯಿ ಕಸುಗಾಯಿಯಾದರೆ ಅದನ್ನು ಹಲ್ಲಿಂದ ಕಚ್ಚಿ,ನಾಲಿಗೆಯಿಂದ ಸವರಿ,'ಇಸ್ಸಿ' ಇದು ಬೇಡ ಎಂದು ಎಸೆಯುವಷ್ಟು ಅದು ಸುಲಭದ ಕೆಲಸವಲ್ಲ.ಮುಪ್ಪಿನ ತನಕ ನಾನು ಏಕೆ ಬದುಕಬಾರದು? ಸಾಯುವ ಗಳಿಗೆಯ ತನಕ ಕಾದದ್ದಾದರೆ ನನಗೂ ಯಾಕೆ ಒಬ್ಬ ಪಮ್ಮ ಸಿಗಬಾರದು? ಉಳಿದವರ ಹಾಗಲ್ಲವಲ್ಲ ನಾವು ಒಮ್ಮೆಗೇ ವಿಧಿಬಂಧದಿಂದ ಅಥವಾ ಎಲ್ಲರಂತೆ ತಾವು ಎಂಬ ಸಾಂಪ್ರದಾಯಿಕ ಶ್ರದ್ಧೆಯಿಂದ ಮಾಲೆ ಹಾಕಿ ಕೊಂಡ ಮೇಲೆ "ನೀನು ದುಗ್ಗಿಯಾಗು

;ನಾನು ಪಮ್ಮನಾಗುತ್ತೇನೆ" ಎನ್ನುವ ಮಾತೇ ಇಲ್ಲವಲ್ಲ ಆಗುವ ಗುಣವನ್ನು ಹೆಣ್ಣು ಪಡೆದಿರ ಬೇಕು.ಅದನ್ನು ಮೆಚ್ಚುವುದಕ್ಕೆ ಗಂಡು ಕಲಿತಿರ ಬೇಕು.ಗಂಡಿನಲ್ಲೂ ಪಮ್ಮವಾಗುವ ಮನಸ್ಸು ,ಬುಧ್ಧಿ,ಯೌವನಕ್ಕಿಂತ ಮೊದಲೇ ಹುಟ್ಟಿರಬೇಕು (ಮೈಮನಗಳ ಸುಳಿಯಲ್ಲಿ:೧೯೭೦:ಪುಟ:೧೪೭,೧೪೮) ಮಂಜುಳೆಯ ಈ ಮಾತಿನಲ್ಲಿ ಗಂಡು ಶ್ರೇಷ್ಠವಲ್ಲ;ಹೆಣ್ಣು ಕನಿಷ್ಠವಲ್ಲ ಪರಸ್ಪರ ಅರ್ಥ ಮಾಡಿಕೊಂಡರಷ್ಟೇ ಸಂಸಾರ ಸಾರ್ಥಕ ಇಲ್ಲದೆ ಹೋದರೆ "ಲೇ ಹೆಣ್ಣೆ ನಿನ್ನ ಮಗು ಗಲೀಜು ಮಾಡಿತು ಎಂಬಂತಾದರೆ ಸಂಸಾರ ಎಂಬುದು ಜೋಡಿ ಎತ್ತು ಜೊತೆಗಿದ್ದಷ್ಟೇ ಲಾಭ ಎಂಬ ಆಕೆಯ ಮಾತು ಎಷ್ಟು ಅರ್ಥಪೂರ್ಣ ಎನಿಸುತ್ತದೆ.

ಮೈಯಷ್ಟೇ ತೃಪ್ತಿಯನ್ನು ಕಂಡು ,ಮನಸ್ಸು ಅತೃಪಿಯಲ್ಲೆ ತೊಳಲಾಡುವ ಒಂದು ಹೆಣ್ಣು ಜೀವದ ಕತೆ ಮೈಮನಗಳ ಸುಳಿಯಲ್ಲಿ. ಕಾರಂತರೆ ಈ ಕಾದಂಬರಿಯ ಮುನ್ನುಡಿಯಲ್ಲಿ "ಗಂಡು-ಹೆಣ್ಣುಗಳ ಮೈ ಮನಗಳ ಸಂಬಂಧದ ಚೆಲುವು ಅಸಹ್ಯಗಳನ್ನು ಇಲ್ಲಿ ಮಂಜುಳೆಯೆಂಬ ಒಬ್ಬಳು ಗರತಿಯಲ್ಲದವಳ ಬಾಳಿನ ಮುಖದಿಂದ ಚಿತ್ರಿಸಲು ಪ್ರಯತ್ನಿಸಿದ್ದೇನೆ".ಎಂದಿದ್ದಾರೆ ಗರತಿಯರಲ್ಲಿ ಕಂಡು ಬಾರದ ಸದ್ಭಾವನೆ ಹಾಗೂ ಮಾನವ ಸಂಬಂಧಗಳನ್ನು ಉಳಿಸಿಕೊಳ್ಳುವ ಆಹಾಂಕ್ಷೆ ,ವೇಶ್ಯೆಯರಲ್ಲಿ ಇದ್ದುದನ್ನು ತಾನು ಕೇಳಿ ತಿಳಿದಿದ್ದೇನೆ.ಅಂಥವರನ್ನು ಕಂಡಿದ್ದೇನೆ ಎನ್ನುತ್ತಾರೆ ಕಾರಂತರು. ಇವರು ಎಲ್ಲವನ್ನು ನೇರವಾಗಿಯೆ ಹೇಳಬಯಸುವವರು.ಅದು ಅವರು ಕಂಡು ಅನುಭವಿಸಿದ ಸತ್ಯವೂ ಆಗಿರುತ್ತದೆ.ಮುಖ್ಯವಾಗಿ ಕೃತಿಕಾರನೊಬ್ಬ ತನ್ನ ಚಿಂತನೆಗಳನ್ನು ಪರಿಸರದ ಮೂಲಕ ಪಡೆಯುತ್ತಾನೆ.ಅವನ ಪರಿಸರವು ಸ್ತ್ರೀಕರಣಗೊಂಡ ಸಮಾಜದಲ್ಲಿ ಭಿನ್ನ ಆಸಕ್ತಿಗಳನ್ನು ಪ್ರಕಟಿಸುತ್ತಿರುತ್ತದೆ ಎಂಬ ವಿಚಾರವೇ ಇಂದು ಹೆಚ್ಚು ಮನ್ನಣೆಯನ್ನು ಪಡೆದುಕೊಂಡಿದೆ

೩. ದಾಂಪತ್ಯದ ಒಡಕು ಮತ್ತು ಹೆಣ್ಣು

ಗಂಡು ಮತ್ತು ಹೆಣ್ಣಿನ ನಡುವಿನ ದಾಂಪತ್ಯದ ಚಂಚಲ ಸಂಬಂಧಗಳ ಕುರಿತು ರಚಿತವಾದ ಕಾದಂಬರಿ ಸರಸಮ್ಮನ ಸಮಾಧಿ. ಕಾದಂಬರಿಯ ಚಂದ್ರಯ್ಯ ಹೇಳುವಂತೆ "ಮದುವೆಯಾಯಿತು ಎಂದಾದೊಡನೆಯೇ ಹೆಣ್ಣು-,ಗಂಡುಗಳು ಸಂಭಾವಿತರಾಗುವುದಿಲ್ಲ ಎಂದೂ.ಈ ಮಾತಿಗೆ ಸಾವಿರ ಅರ್ಥಗಳನ್ನು ಸಾವಿರ ರೀತಿಯಲ್ಲಿ ಮಾಡಿದವರುಂಟು.ಒಮ್ಮೆ ಈಶ್ವರ ಭಟ್ಟರೇ ಈ ತರ್ಕವನ್ನು ಅವನೊಡನೆ ತೆಗೆದರು ಅದಕ್ಕೆ ಚಂದ್ರಯ್ಯನೆಂದ ಭಟ್ಟರೇ,ಸಿಟ್ಟು ಮಾಡಬೇಡಿ.ಈಗ ನಿಮ್ಮನ್ನೇ ನೀವು ಕೇಳಿ ,ನೀವು ಎಷ್ಟು ಒಲವಿನಿಂದ ನಿಮ್ಮವಳೊಡನೆ ಬಾಳಿದ್ದೀರಿ.ಅವರಿಗೆ ನಿಮ್ಮಲ್ಲಿ ಎಷ್ಟು ಒಲವಿದೆ.ಹೇಳಿ ಶಾಸ್ತ್ರದ ಹೆದರಿಕೆಯಿಂದಲೊ, ನರಕದ ಹೆದರಿಕೆಯಿಂದಲೋ ನೀವು ದಾಂಪತ್ಯದ ಹೊರಗೆ ಕಾಲಿಟ್ಟಿರಲಾರಿರಿ ಈಶ್ವರ ಭಟ್ಟರು ಮೊದಲಿಗೆ ನಕ್ಕರೂ, ಆಮೇಲೆ ಅದು ಸಹಜ ಅನ್ನುವ, ಮದುವೆಯಾಯಿತೆಂದೊಡನೆಯೇ ಮನಸ್ಸು ಕೂಡುತ್ತದೆಯೆ".

ವೆಂಕಟರಮಣಯ್ಯನ ಮಗ ಹಿರಣ್ಯನ ಹೆಂಡತಿ ಭಾಗೀರಥಿ. ಕಾರಂತರು ಇಲ್ಲಿ ಹೆಣ್ಣು ತಲತಲಾಂತರದಿಂದ ಬಂದ ಗೊಡ್ಡು ಸಂಪ್ರದಾಯವನ್ನು ಪ್ರತಿಭಟಿಸಬೇಕೆಂಬ ಆಶಯದಿಂದ ಭಾಗೀರಥಿಯ ಪಾತ್ರವನ್ನು ಚಿತ್ರಿಸಿದಂತಿದೆ ವೆಂಕಟರಮಣಯ್ಯ ಹೆಂಡತಿಯೊಡನೆ ' ನಿನ್ನ ಮಗನಿಗೆ ಸ್ವಲ್ಪ ಬುದ್ದಿಯನ್ನು ಹೇಳು -ಹೆಂಡತಿ ಮನೆಗೆ ಬಂದಳು ಎಂದು ನಾಯಿಯ ಹಿಂದಿನ ಬಾಲವಾಗುವುದಲ್ಲ, ಯಾವುದು ಎಲ್ಲೆಲ್ಲಿರ ಬೇಕೋ ಅದು ಅಲ್ಲಲ್ಲಿ ಇದ್ದರೇನೆ ಚಂದ ,ಕಾಲಿನದ್ದು ಕಾಲಿಗೆ!'ತಲೆಗಲ್ಲ' ಎಂದರು.ಆದರೆ ಇಲ್ಲಿ ಹಿರಣ್ಯನ ತಾಯಿ ಕೂಡ "ಈಗಲೇ ಸಲಿಗೆ ತೋರಿಸಿದರೆ 'ನೆಸಕೊಟ್ಟ ನಾಯಿ ನೊಸಲು ನಕ್ಕಿತು' ಎಂಬತಾದರೆ ಕಷ್ಟ,ಅದಕ್ಕೇನೆ ಅವರೆಂದದ್ದು ,'ಕಾಲಿಗಿರುವುದು ಕಾಲಿಗೆ ಇರಬೇಕು'" ಅಂದರೆ ಇಲ್ಲಿ ಗಂಡು ತನಗೆ ಬೇಕಾದ ಹಾಗೆ ಹೆಣ್ಣನ್ನು ಪಳಗಿಸಿಕೊಳ್ಳ ಬಲ್ಲ ಎಂಬುದಕ್ಕೆ ಉದಾಹರಣೆ ಸಿಕ್ಕಂತಾಯಿತು. ಆದರೆ ಇವರ ಮಾತನ್ನು ಕೇಳಿದ ಭಾಗೀರಥಿ ಮಾತ್ರ ತವರು ಮನೆಗೆ ಹೊರಟು ಹೋಗುತ್ತಾಳೆ. ಹಾಗೆ ಹೋಗುವಾಗ ಗಂಡ ಹೋಗಿ ಬರುತ್ತೀಯಾ ಎಂದಾಗ 'ಹೂಂ-ಹೋಗುತ್ತೇನೆ, ಆದರೆ ಕಾಲಿನದಾಗಿ ಬರುವುದಿಲ್ಲ"ಎಂದಳು.

ಭಾಗೀರಥಿಯ ಮಾವನ ಮನೆಯಲ್ಲಿ ಕೇಳಿದ ಕಟೂಕ್ತಿಯು ಅವಳಲ್ಲಿ ಅಳಿಯಲಾರದ ಗಾಯವನ್ನುಂಟು ಮಾಡಿತ್ತು."ತಾನು ತಿರುಗಿ ಆ ಮನೆಗೆ ಕಾಲಿಡುವುದಿಲ್ಲವೆಂದು ಅವಳು ನಿಶ್ಚಯಿಸಿದಳು. ಹಿರಣ್ಯನ ಮೇಲೆ ಅವಳಿಗೆ ಪ್ರಥಮದಲ್ಲಿ ಬೇಸರವಾಗಿರಲಿಲ್ಲವಾದರೂ.ತಂದೆ ನುಡಿದಂತೆ ತಪ್ಪು ಒಪ್ಪುಗಳ ಎಣಿಕೆಯಿಲ್ಲದೆ ಕುಣಿಯುವ

ಮಗನಾದರೆ, ತನಗೆ ಆ ಮನೆಯಲ್ಲಿ ಯಾವ ಮರ್ಯಾದೆ ದೊರೆತೀತೆಂಬ ಸಂಶಯ ಬಂದಿತ್ತು.ಅದರಿಂದ ಒಮ್ಮೆಗೇ ಅವಳ ಮನಸ್ಸು ಮುರಿದಿತ್ತು.ಎರಡು ಮೂರು ಬಾರಿ ಭಾಗೀರಥಿಯ ತಂದೆಯು ಅವಳನ್ನು ಗಂಡನ ಮನೆಗೆ ಕಳುಹಿಸಲು ಪ್ರಯತ್ನಿಸಿದ .ಆದರೆ ಭಾಗೀರಥಿ'ಆ ಮನೆಯಲ್ಲಿ ತಾನು ಕಾಲಿಡಲಾರೆ ,ಅವರಿಗೆ ಕಾಲಿಂದ ತಲೆಗಿರಿಸುವ ಒಡವೆ ವಸ್ತುಗಳು ಬೇಡ, ಕಾಲಿನ ಕೆರವಾಗಿ ಗಂಡನ ಮನೆಯಲ್ಲಿ ಬಾಳುವುದಕ್ಕಿಂತ ಬಾವಿಗೆ ಹಾರುವುದೇ ಒಳಿತು' ಎಂಬ ಉತ್ತರವಿತ್ತಳು.

ಕುಟುಂಬ ವ್ಯವಸ್ಥೆಯೊಳಗಣ ಅಸಂತುಷ್ಟಿ,ಹೊರಗೆ ಸ್ಫೋಟಗೊಳ್ಳದೆ ಒಳಗೊಳಗೆಕುದಿಯುತ್ತಿರುವ ಆವಿಗೆಯ ಬೆಂಕಿಯಂತೆ,ತಿಮ್ಮಪ್ಪಯ್ಯನ ಹೆಂಡತಿ ಜಾನಕಿ,ರಾಮಣ್ಣಯ್ಯನ ಮಗಳು ಜಲಜಾಕ್ಷಿ, ಅಣ್ಣಪ್ಪ ಕಮ್ತಿಯ ಹೆಂಡತಿ ಸುನಾಲಿನಿ, ಸೀತಾರಾಯನ ಪತ್ನಿನಾಗವೇಣಿ ಕಾಣಿಸಿಕೊಳ್ಳುತ್ತಾರೆ.ಇದ್ದುದರಲ್ಲಿ ಸುನಾಲಿನಿಯ ಪ್ರಗತಿಗಾಮಿ ವಿಚಾರಗಳು ಪ್ರತಿಭಟನೆಯ ಕೀರಲು ಧ್ವನಿಯಂತೆ ಕಂಡರೂ ಅವಳ ಮನೋನಿಗ್ರಹ,ಧೈರ್ಯ ಉಳಿದವರಿಗಿಂತ ಅವಳು ಸಾಹಸಿಯೆಂದು ಗಣಿಸಲು ಪೂರಕವೆನಿಸುತ್ತದೆ. ಆದರೂ ಓರ್ವ ಸುಸಂಸ್ಕೃತ ಹೆಣ್ಣಿನ ಒಳತೋಟಿಯಲ್ಲಿ ಲೈಂಗಿಕ ಅಸಂತುಷ್ಟಿ ಧ್ವನಿಸುವುದನ್ನು ಕೂಡ ಇಲ್ಲಿ ಅಲ್ಲಗೆಳೆಯಲಾಗುವುದಿಲ್ಲ".ಮನಸ್ಸು ಕೂಡದ ದೈಹಿಕ ಮಿಲನ ಜೀವನ್ಮೃತಾವಸ್ಥೆಗಿಂತ ಕಡಿಮೆಯಲ್ಲ" ಎಂಬ ಭಾವ ಅವಳದು.

ಈ ಕಾದಂಬರಿಯಲ್ಲಿ ಸಫಲ ದಾಂಪತ್ಯಕ್ಕೆ ತೊಡಕಾಗುವ ವಸಂಗತಿಗಳನ್ನು ಕೇವಲ ಗಂಡಸು ಮಾತ್ರವಲ್ಲ, ಹೆಣ್ಣು ಕೂಡ ತನ್ನ ದೌರ್ಬಲ್ಯದಿಂದ, ನಿಷ್ಕಾಳಜಿಯಿಂದ ಸೃಷ್ಟಿಸಿಕೊಳ್ಳುತ್ತಾಳೆ, ಎನ್ನುವುದಕ್ಕೆ ಸುನಾಲಿನಿಯ ಮಾತುಗಳೇ ಸಾಕ್ಷಿಯಾಗುತ್ತವೆ".ಎಷ್ಟೋ ಮನೆಗಳಲ್ಲಿ ತಾವು ಸುಖಿಗಳೆಂಬಂತೆ ಚಿನ್ನ, ಸೀರೆ ತೊಟ್ಟು ಸ್ತ್ರೀಯರು ತಿರುಗುತ್ತಾರೆ, ಗಂಡಂದಿರು ಮನೆಯ ಹೊರಗೆನೇ ಅಡುಗೆ-ಗಿಡುಗೆಯಾಯಿತೆಂದರೆ ನೆರೆಮನೆಗೆ ತಾವು ಹೋಗುವುದು,ಇಲ್ಲವಾದರೆ ತಮ್ಮ ಮನೆಗೆ ನೆರೆಮನೆಯವರನ್ನು ಅಮಂತ್ರಿಸುವುದು ಅಲ್ಲಿಂದ ಅವರ ಮನೆಯಲ್ಲಿ ಹೀಗೆ ,ಅವಳನ್ನು ಗಂಡ ಬಿಟ್ಟನಂತೆ, ಇವಳು ಗಂಡನನ್ನು ಬಿಟ್ಟಳಂತೆ ಕಿವಿಗೆ ಜಿಗುಪ್ಸೆ ಬರುವಷ್ಟು ಇದೇ ಸುದ್ದಿ.ಆದರೂ ಯಾರೂ ಅತೃಪ್ತರಂತೆ ಕಾಣುವುದಿಲ್ಲ".

ಸರಸಮ್ಮನಸಮಾಧಿಯಲ್ಲಿ ಮೈಯಹಸಿವು ಸ್ಥಾಯೀಭಾವವಾದರೆ,ದಾಂಪತ್ಯದಲ್ಲಿಯ ವಿರಸವೇ ಸಂಚಾರಿಭಾವ. ಅನೇಕ ಗತಿಗಳನ್ನು ಶೋಧಿಸುತ್ತಾ ಹೊರಟು ಅಸ್ಥಿರತೆಯ ಸಂವೇದನೆಯಲ್ಲಿ ಕೊನೆಗೊಳ್ಳುತ್ತದೆ.ಸರಸಮ್ಮ ಮಹಾಸತಿ (ಮಾಸ್ತಿ) ಯಾಗಿ ಇತರರಿಂದ ಪೂಜೆಗೊಳ್ಳುವ ಹಿನ್ನೆಲೆಯಲ್ಲಿ ಅವಳ ಬದುಕೊಂದು ಬಯಕೆಯ ಕತೆಯಾಗಿರುವ ಗೌಪ್ಯವಿದೆ.ಸಾಕ್ಷಾತ್ ಸೀತೆಯ ಅವತಾರವಾಗಿದ್ದ ಸರಸಮ್ಮ ಅದೇ ಊರಿನ ನೀಲಾಚಯ್ಯನನ್ನು ಮದುವೆಯಾಗಿ ತಾರುಣ್ಯದಲ್ಲೇ ಗಂಡನನ್ನು ಕಳೆದುಕೊಂಡು ಸಹಗಮನ ಮಾಡಿದಳೆಂದು ಮೂಡಂಬೈಲಿನ ಜನರ ನಂಬಿಕೆ.ಅಂದಿನಿಂದ ಮಹಾಸತಿಯಾದ ಸರಸಮ್ಮನ ಸಮಾಧಿಗೆ ಪೂಜೆ ಸಲ್ಲುತ್ತಿದೆ. "ಚಂದ್ರಯ್ಯನೊಂದಿಗೆ ಸರಸಮ್ಮನ ಗುಡಿಯಿಂದ ಓಡಿಬಂದ ಬೆಳ್ಯಕ್ಕ'ಅದು ನನ್ನದೇ ಮನೆ ನನ್ನ ಪತಿ ನನ್ನನ್ನು ಈ ಅವಸ್ಥೆಗೆ ಇಳಿಸಿದನು, ನೀಲಾಚಲ ಮಲಗಿದ ಸ್ಥಳ' ಅವನ ಪ್ರೇತ ನನ್ನನ್ನು ಅಲ್ಲಿ ಅಂಕೆಯಲ್ಲಿರಿಸುತ್ತಿದೆ. ನಾನು ಬೇಡವೆಂದು ರೋದಿಸಿದರೂ,ಅವನ ರೋಗಿಷ್ಟ ಶರೀರದೊಡನೆ ನನ್ನನ್ನು ಹಾಕಿ ಸುಟ್ಟರು ನರಘಾತಕರು. ನನ್ನನ್ನು ಸುಟ್ಟು,'ಮಹಾಸತಿಯನ್ನಾಗಿ ಮಾಡಿದರು". ಇಲ್ಲಿ ದೇವಿ ಪಟ್ಟಕ್ಕಿಂತ ದಾಂಪತ್ಯದ ಸುಖವೇ ಹೆಣ್ಣಿಗೆ ಹೆಚ್ಚು ಎಂಬುದು ಅರ್ಥವಾಗುತ್ತದೆ.

ಸುನಾಲಿನಿ ಹೇಳುವಂತೆ "ಸಂಸಾರಕ್ಕೆ ನೆರವಾಗದ ವಿದ್ಯೆ ಎಷ್ಟಿದ್ದರೇನು? ಎರಡು ಅಪರಿಚಿತ ಹೆಣ್ಣು-ಗಂಡುಗಳನ್ನು ಬೇರೆ ಬೆಳೆಸಿ,ಒಂದು ದಿವಸ ಅವರನ್ನು ಮಂಟಪದೊಳಗೆ ಕುಳ್ಳಿರಿಸಿ ದಾಂಪತ್ಯದಲ್ಲಿ ಬೆಸೆಯಯತ್ತೇವೆ ಎಂಬುದು ಭ್ರಮೆಯಲ್ಲವೆ".ಭೋಗಕ್ಕಲ್ಲ ಎಂದು ಸುನಾಲಿಯಿಂದ ಹೇಳಿಸುವ ಕಾರಂತರು ಅವಳು ಕಾತರಿಸುವ ಸುಖ ಯಾವುದೆಂದು ತಿಳಿಸುವ ಪ್ರಯತ್ನದಲ್ಲಿ ಒಂದೊಂದು ಹೆಣ್ಣಿನ ಅಂತರಂಗವನ್ನು ಬಿಚ್ಚಿಡುತ್ತಾರೆ.

ಒಡಹುಟ್ಟಿದವರು ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರೇ ಹೇಳುವಂತೆ "ಗಂಡು-ಹೆಣ್ಣುಗಳ ಸ್ನೇಹದ ಬಾಳಿಗೆ, ಮದುವೆಗೆ,ಸಂಸ್ಕಾರಕ್ಕೆ ಎಷ್ಟೆಲ್ಲಾ ಮುಖಗಳು ಬಂದಾವೆಂದು ಹೇಳಲು ಬಂದೀತೆ, ಒಮ್ಮೆ-

ಪ್ರೇಮದಿಂದಲೋ,ಒಲುಮೆಯಿಂದಲೋ,ಸಂಪ್ರದಾಯದಿಂದಲೋ ವಿವಾಹದ ಕಟ್ಟಿಗೆ ಸೇರಿದವರು ಅದನ್ನು ಯಶಸ್ವಿಯಾಗಿ ಮಾಡುವ ಕೆಲಸ ತನ್ನಿಂದ ತಾನೇ ಆಗುತ್ತದೆಂದು ತಿಳಿಯಲು ಬರುವಂತಿಲ್ಲ. ಅದು ಅಧಿಕಾರ, ಶಾಸ್ತ್ರಗಳ ಬಲವಂತಗಳಿಂದ ನಡೆಯುವಂತಹುದೂ ಅಲ್ಲ,ಬದಲು, ಗಂಡ ಹೆಂಡಿರಿಬ್ಬರ ತ್ಯಾಗ, ಪ್ರೇಮ, ಸಹನೆಗಳ ಮೇಲೆಯೇ ಹೊಂದಿದೆ.ಮನಸ್ಸು ಒಡೆಯಲು ದಾಂಪತ್ಯಕ್ಷೇತ್ರದಲ್ಲಿ ಎಷ್ಟೋ ಕಾರಣಗಳಿವೆ. ಆದರೆ ಒಡೆಯದಂತೆ ಕಾಪಾಡ ಬೇಕು ಎಂದು ಪ್ರಯತ್ನ ಪೂರ್ವಕವಾಗಿ ನಡೆದುಕೊಳ್ಳುವುದೂ ಅಷ್ಟೇ ಅವಶ್ಯಕ, ಒಡಕಿನ ಕಾರಣವನ್ನು ತಾವೇ ತಿದ್ದಿಕೊಳ್ಳ ಬೇಕು".ಕಾರಂತರ ಈ ಮಾತು, ಹೆಣ್ಣಿಗೆ- ಗಂಡಿಗೆ ಇಬ್ಬರಿಗೂ ಅನ್ವಹಿಸುವಂತಹದು. ಇಲ್ಲಿ ಯಾರೂ ಶ್ರೇಷ್ಠರಲ್ಲ, ಯಾರೂ ಕನಿಷ್ಠರಲ್ಲ, ನೀರೆಲ್ಲವೂ ತೀರ್ಥ ಎಂದ ರಸ ಋಷಿಯ ವಾಣಿ ನೆನಪಾಗುತ್ತದೆ.

೪.ತಾಯ್ತನದ ಪರಿಭಾಷೆಯನ್ನೇ ಮರುಚಿಂತನೆಗೆ ಒಳಪಡಿಸುವ ಕಾದಂಬರಿ: ಹೆತ್ತಳಾ ತಾಯಿ

ಗಂಡು-ಹೆಣ್ಣಿನ ಸಂಬಂಧದ ಪ್ರಶ್ನೆ ಬರಿಯ ದೇಹದ ಬಯಕೆಯನ್ನು ತೃಪ್ತಿಗೊಳಿಸುವ ಪ್ರಶ್ನೆಯಲ್ಲ,ಹೆಣ್ಣಿಗೆ ಸಹಜವಾದ ತಾಯ್ತನದ ಬಯಕೆ, ಭದ್ರತೆಯ ಬಯಕೆ ,ಮರ್ಯಾದೆಯಾಗಿ ಬಾಳ ಬೇಕೆಂಬ ಬಯಕೆ ಇವನ್ನೆಲ್ಲಾ ಒಳಗೊಂಡ ಪ್ರಶ್ನೆ. ಈ ಕಾದಂಬರಿಯಲ್ಲಿ ಪ್ರಮುಖವಾಗಿ ಮೂರು ಸ್ತ್ರೀ ಪಾತ್ರಗಳಿವೆ, ಒಂದು ವೆಂಕಟಪ್ಪನ ಮಡದಿ ಸುಶೀಲಕ್ಕ,ಇನ್ನೊಂದು ಸುಬ್ಬಯ್ಯನ ಮಡದಿ ಕುಸುಮೆ ,ಇನ್ನೊಂದು ವೆಂಕಪ್ಪನ ಎರಡನೆಯ ಪತ್ನಿ ವಿಮಲೆ.

ಇಲ್ಲಿ ಕುಸುಮೆ ಗಂಡನ ಸ್ನೇಹಿತ ವೆಂಕಪ್ಪನಿಂದ ಮಗುವನ್ನು ಪಡೆಯುತ್ತಾಳೆ, ಆದರೆ ಇದಕ್ಕೆ ಕಾರಣ ಅವಳ ಸಂತಾನ ನಾಶದ ಕತಯೇ ಕಾರಣ.ಬಯಸಿ,ಬಯಸಿ ಬೇಡಿದ ಕೂಸುಗಳು ಹುಟ್ಟುವ ಮೊದಲು,ಹುಟ್ಟಿದ ಬಳಿಕ,ಎಂದು ಮಾಯವಾದರೆ ಯಾವ ತಾಯಿಯ ಕರುಳು ತಾಳೀತು? ಅದರಿಂದ ಮನಸ್ಸು ನಿರ್ದಯವಾಗಿ ಬಿಟ್ಟಿದೆ,ಈಗ ಮಗ ಸುಧೀರನಿಗೆ ಐದು ವರ್ಷವಾಗಿದೆ.ಅವಳ ಮನಸ್ಸಿನಲ್ಲಿ ಇನ್ನೊಂದು ಹೆಣ್ಣು ಹಡೆಯಬೇಕೆಂಬ ಉತ್ಕಟೇಚ್ಛೆ ಬಲವಾಗಿದೆ.ತನ್ನ ಪತಿಯಿಂದ ಇಂಥ ಭಾಗ್ಯ ದೊರಕದೆಂದು ಗೊತ್ತಿದೆ."ಒಮ್ಮೆ ಬೂದಿಯಿಂದ ಮರೆಯಾದ ನೆನಪಿನ ಕೆಂಡ ತಿರುಗಿ ಬೂದಿ ಕಳಚಿ ಜ್ವಲಿಸತೊಡಗಿತು,ಅವಳ ತೀವ್ರಗೊಂಡ ಬಯಕೆಗೆ ಸರಿಯಾಗಿ ವೆಂಕಪ್ಪ ಒಂದು ರಾತ್ರಿ ಅವಳ ಮನೆಯಲ್ಲೆ ವಿಶ್ರಮಿಸಿದ. ಆದರೆ ಇಂಥ ಆಟ ಒಂದಲ್ಲ ಒಂದು ದಿನ ಬೆಳಕಿಗೆ ಬಾರದೆ ಹೋದೀತೆ? ಸುಬ್ಬಯ್ಯ ಕಾಯಿಲೆಯಿಂದ ಮಲಗಿಬಿಟ್ಟ, ಈ ಸ್ಥಿತಿಯಲ್ಲಿ ಹೆಂಡತಿಯನ್ನು ದೂರವಿಡಬೇಕೆಂದು ಡಾಕ್ಟರರು ಹೇಳಿದ್ದರು. ಸುಬ್ಬಯ್ಯ ಹಾಗೆಯೆ ನಡೆದುಕೊಂಡಿದ್ದಾನೆ.ಆದರೆ ಕುಸುಮೆಯಲ್ಲಿ ಮತ್ತೆ ಬಸುರಿಯ ಲಕ್ಷಣಗಳು ಕಾಣಿಸತೊಡಗಿವೆ.ಕುಸುಮೆ ತನ್ನನ್ನು ಖಂಡಿತವಾಗಿಯೂ ವಂಚಿಸಿದ್ದಾಳೆ ಎಂಬುದು ಮನಸ್ಸಿನಲ್ಲಿ ಮಿಂಚಿದೊಡನೆ ಆತ ಹುಲಿಯಂತಾದ," ಇಲ್ಲಿಂದ ಕುಸುಮೆಯ ಅಧಃಪತನ ಆರಂಭವಾಗುತ್ತದೆ.ತನ್ನ ಮೇಲಿರುವ ಗಂಡನ ಜಿಗುಪ್ಸೆಯನ್ನು ಆಕೆ ಸಹಿಸಿಕೊಳ್ಳದಾದಳು,ಕುಸುಮೆ ಹೆತ್ತು ತಾಯಿಯಾದಳೇನೋ ನಿಜ ಆದರೆ ಮಾನಸಿಕವಾಗಿ ಸತ್ತು ತಾಯಿಯಾದಳು,ಆದರೆ ಹೆಣ್ಣಿನ ಮನೆಮುರುಕತನ ಕೇವಲ ಪಶ್ಚಾತ್ತಾಪದಿಂದ ದುರಸ್ತಿಯಾಗಲಾರದು ಎಂಬ ಒಳದನಿ ಕಾದಂಬರಿಯ ಮೂಲದ್ರವ್ಯವು ಆಗುತ್ತದೆ.

ಮಾನವ ಸ್ವಭಾವದ ಅಂತರ್ಯದಲ್ಲಿ ಕೆಲವು ಬೇಕುಗಳಿರುತ್ತವೆ, ಉದಾಃ ಶಾರೀರಿಕ ತೃಪ್ತಿ, ಭದ್ರತೆಯ ಪರಿಜ್ಞಾನ,ತಪ್ಪಿಸಿಕೊಳ್ಳುವಿಕೆ, ಗುರುತಿಸಿಕೊಳ್ಳುವಿಕೆ,ಆಕರ್ಷಣೆ,ಆನಂದ ಹಾಗೂ ವಶೀಕರಣ ಪಾಶ್ಚಾತ್ಯ ಮನಃಶಾಸ್ತ್ರಜ್ಞರಿಗೆ ಇಷ್ಟೇ ಕಂಡಿದ್ದರೆ ಭಾರತೀಯವೆನಿಸುವ ಮನಸ್ಸಿನಲ್ಲಿ ಹುಟ್ಟುವ ಅತೃಪ್ತ ಬಯಕೆಯು ಮಾತೃತ್ವದ ಹಂಬಲದಿಂದ ಕ್ಷೋಭೆಗೊಳ್ಳುವುದು ಕೂಡ ಈ ಎಲ್ಲದಕ್ಕಿಂತ ಪ್ರಭಾವಶಾಲಿಯಾದುದೆಂಬುದನ್ನು ಇಲ್ಲಿದ್ದುಕೊಂಡೇ ಅರಿತುಕೊಳ್ಳಬೇಕಾಗುತ್ತದೆ.ಒಂದು ನೆಲದ ಸಂಸ್ಕೃತಿಯ ಬೇರುಗಳು ಗಟ್ಟಿ ತಳಪಾಯದಲ್ಲಿ ಜಾಲರಿ ಹೆಣೆದಿರುವಾಗ ಒಂದು ನಿರ್ದಿಷ್ಟ ನಂಬಿಕೆಯ ಸ್ತರದಲ್ಲೆ ಮನಸ್ಸು ಮಾತಾಡುತ್ತದೆ.ಈ ಎಲ್ಲದರ ಮೊತ್ತ ಕುಸುಮೆಯಾಗುವುದು. ಮತಿಗೆಟ್ಟ ಬಾಳ್ವೆಯು ಬೌದ್ಧಿಕ ದಿವಾಳಿಯನ್ನು ಸಾರುವಂತೆ ಜೀವವಿರೋಧಿಯಾಗುವ ಅಪಾಯವನ್ನು ಮುಂದೊಡ್ಡುತ್ತದೆ ಲೈಂಗಿಕ ಸ್ತರದಲ್ಲಿ ಇದು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಬದುಕನ್ನು ಅಸ್ತವ್ಯಸ್ತಗೊಳಿಸುತ್ತದೆ "ಇತ್ತೀಚೆಗಂತು ಕುಸುಮೆಯ ಮುಖ ತೀರ ಇಳಿದು ಹೋಗಿತ್ತು ಅವಳು

ಅನ್ನಪಾನಗಳನ್ನು ಸಮನಾಗಿ ಮಾಡುತ್ತಿರಲಿಲ್ಲ.ಅವಳಿಗೂ. ಜಮುನೆಯೇ ಸಮಧಾನ ಹೇಳಬೇಕು.ಅವಳ ಉತ್ತರವಿಷ್ಟೇ ನನ್ನಂತಹ ನಾಯಿ ಬದುಕಿದರೇನು.ಸತ್ತರೇನು"ಎಂದು ಗದ್ಗದಿತಳಾಗಿ ರೋದಿಸುತ್ತಾ ಅವನ ಕಾಲನ್ನು ಹಿಡಿದಳು"ಒಂದು ಸಾರಿ ಕ್ಷಮಿಸಿ ನನ್ನನ್ನು ನಾನು ಹುಚ್ಚಿಃ ನಾನು ಮರುಳಿ ಎಂದು ತನ್ನನ್ನು ಅನಂತವಾಗಿ ಶಪಿಸಿಕೊಂಡಳು. ಪಶ್ಚಾತ್ತಾಪದ ಬೆಂಕಿಯಲ್ಲಿ ಕುಸುಮೆ ಬೇಯುತ್ತಾ ಜೀವ ಇದ್ದೂ ಅಕ್ಷರಶಃ ಸತ್ತಂತೆ ಬಾಳುತ್ತಾಳೆ. ತಾಯ್ತನದ ಹಂಬಲದಲ್ಲಿ ತಾನು ತಪ್ಪು ಮಾಡುತ್ತಿರುವುದನ್ನು ಗಮನಕ್ಕೆ ತಂದುಕೊಳ್ಳದೆ ಅನಂತರ ಅತ್ಯಂತ ದಯನೀಯ ಸ್ಥಿತಿಗಿಳಿಯುವ ಹೆಣ್ಣಿನ ಸ್ಥಿತಿ ನೋಡಿ ಓದುಗರ ಎದೆಯಲ್ಲಿ ಅವಳಿಗಾಗಿ ಮರುಕ ಹುಟ್ಟದಿರಲು ಸಾದ್ಯವಿಲ್ಲ.

ಒಟ್ಟಿನಲ್ಲಿ ಕಾರಂತರು ಹೆಣ್ಣಿನ ಮನೋಲೋಕವನ್ನು ಒಳಹೊಕ್ಕು ಚಿತ್ರಿಸುತ್ತಾರೆ. ಅಲ್ಲಿ ವಿಸ್ಮೃತಿಯಾಗಲಿ.ಸಂಭ್ರಮವಾಗಲಿ.ಉತ್ಪ್ರೇಕ್ಷೆಯಾಗಲಿ.ಭ್ರಮೆಗಳಾಗಲಿ ಇಲ್ಲ.ಹೇವರಿಕೆಯಾಗಲಿ.ತಿರಸ್ಕಾರವಾಗಲಿ ಇಲ್ಲ.ಹೆಣ್ಣು ಮಕ್ಕಳ ಲೈಂಗಿಕತೆಯ ಬಗ್ಗೆ ಆ ಕಾಲಕ್ಕೆ ಕಾರಂತರ ದೃಷ್ಟಿಕೋನ ಎಂತಹದ್ದು ಎನ್ನುವುದನ್ನು ಅವರ ಸ್ತ್ರೀಪಾತ್ರಗಳ ಮೂಲಕ ನೋಡಬಹುದು. ಬೆಳ್ಳಿ.ಮಂಜುಳೆಯಂತಹವರ ಲೈಂಗಿಕತೆ ಕೂಡ ಅವರಿಗೆ ಹಾದರ ಅಂತ ಕಂಡಿಲ್ಲ.ಅಲ್ಲಿ ಇವತ್ತಿನ ವರ್ತಮಾನದ ಬೆಡಗಾಗಲಿ.ಭಿನ್ನಾಣವಾಗಲಿ ಇಲ್ಲ.ವೈಭವೀಕರಣವು ಇಲ್ಲ.ಕಾರಂತರು ದೊಡ್ಡವರಾಗುವುದು ಇಲ್ಲಿಯೆ.ಕಾರಂತರು ಒಬ್ಬ ಪುರುಷರಾಗಿ ಹೆಣ್ಣಿನ ಮನೋಲೋಕವನ್ನು ಅವರು ಅರ್ಥೈಸಿಕೊಂಡ ಬಗೆ ಮೆಚ್ಚುಗೆಗೆ ಪಾತ್ರವಾಗುವಂತಹದ್ದು.ಆದ್ದರಿಂದಲೇ ಜ್ಞಾನಪೀಠ ಪ್ರಶಸ್ತಿ ವಿಜೇತ ಕೋಟ ಶಿವರಾಮ ಕಾರಂತರಿಗೆ ಅವರೇ ಸಾಟಿ.ಅವರನ್ನು ಮತ್ತೊಬ್ಬರೊಂದಿಗೆ ಹೋಲಿಸಲು ಬಹುಶಃ ಸಾಧ್ಯವೇ ಇಲ್ಲ.

**ಪರಾಮರ್ಶನ ಗ್ರಂಥಗಳು:**


೧. ಮೈಮನಗಳ ಸುಳಿಯಲ್ಲಿ -ಶಿವರಾಮ ಕಾರಂತ

೨. ಸರಸಮ್ಮನ ಸಮಾಧಿ -ಶಿವರಾಮ ಕಾರಂತ

೩. ಹೆತ್ತಳಾ ತಾಯಿ -ಶಿವರಾಮ ಕಾರಂತ

೪. ಚೋಮನದುಡಿ -ಶಿವರಾಮ ಕಾರಂತ